c) Whether it is a fact that promotions to the posts of Executive Engineers are not given in the irrigation Department.
d) If so, the reasons for the same;
e) The action proposed to be taken by the Government to give promotions to the post of Executive Engineers in Irrigation Department?

Sri S. M. Krishna (Deputy Chief Minister) :

a) 170
b) 20
c) Yes
d) This question does not arise since promotion to the cadre of Executive Engineers are being done in Public Works Department based on common seniority.
e) Does not arise in view of above reply.

ವಿಷಯ : ತುಮಕೂರು ಜಿಲ್ಲೆಯಲ್ಲಿ ರಸ್ತೆಗೆ ಡಾಂಬರ್ ಹಾಕದಿರುವುದು.

Q : 1714

ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಸರಿಯಾಗಿ ರಸ್ತೆಗಳಿಗೆ ಡಾಂಬರ್ ಹಾಕದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.
ಆ) 1990, 1991 ಹಾಗೂ 1992ರಲ್ಲಿ ಒಟ್ಟು ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ಡಾಂಬರ್ ಹಾಕಿದ್ದಾರೆ; (ತಾಲ್ಲೂಕುವಾರು ಪಟ್ಟಿಯನ್ನು ನೀಡುವುದು)
ಇ) ಸರಿಯಾಗಿ ಡಾಂಬರ್ ಹಾಕದಿದ್ದರೆ ಸಂಬಂಧಪಟ್ಟವರ ಮೇಲೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ರಸ್ತೆ ಡಾಂಬರೀಕರಣದ ಕಾಮಗಾರಿಗಳ ಪೈಕಿ ಒಂದು ಪ್ರಕರಣದಲ್ಲಿ ಸರಿಯಾಗಿ ಡಾಂಬರಿನ ಕೆಲಸ ಮಾಡಿಲ್ಲದಿರುವುದು ಸರ್ಕಾರದ

ಗಮನಕ್ಕೆ ಬಂದಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 190.62 ಕಿ.ಮೀ. ಉದ್ದದ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಇ) ತಪ್ಪಿತಸ್ಥರ ಮೇಲೆ ಇಲಾಖಾ ನಿಯಮಾವಳಿಯಂತೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ.

ಅನುಬಂಧ

1989-90, 1990-91 ಹಾಗೂ 1991-92ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಮಾಡಿರುವ ಡಾಂಬರು ಕೆಲಸದ ವಿವರಗಳು.

ಸಂಖ್ಯೆ	ತಾಲ್ಲೂಕುಗಳ ಹೆಸರು	ಡಾಂಬರೀಕರಿಸಲಾದ ರಸ್ತೆಗಳ ಉದ್ದ (ಕಿ.ಮೀ.ನಲ್ಲಿ) 1989-90 ರಲ್ಲಿ	1990-91ನೇ ಸಾಲಿನಲ್ಲಿ	1991-92ನೇ ಸಾಲಿನಲ್ಲಿ	ಒಟ್ಟು
1.	ತುಮಕೂರು	4.70	13.40	16.30	34.40
2.	ಗುಬ್ಬಿ	2.50	4.50	1.60	8.60
3.	ತಿಪಟೂರು	5.00	6.85	6.40	18.25
4.	ಚಿಕ್ಕನಾಯಕನಹಳ್ಳಿ	5.70	1.00	14.00	20.70
5.	ಕುಣಿಗಲ್	2.40	14.53	18.85	35.78
6.	ತುರುವೇಕೆರೆ	-	6.00	10.00	16.00
7.	ಶಿರಾ	3.90	12.45	13.90	30.25
8.	ಕೊರಟಗೆರೆ	-	2.70	6.55	9.25
9.	ಮಧುಗಿರಿ	0.14	3.50	4.70	8.34
10.	ಪಾವಗಡ	-	7.20	1.85	9.05
		24.34	72.13	94.15	190.62

ವಿಷಯ : ವರುಣ ಸಾಲಾ ಕಾಮಗಾರಿ ಕೆಲಸದ ಅಭಿವೃದ್ಧಿ.

Q : 1642

ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?